[illegible] [illegible]
[illegible] [illegible]
[illegible] [illegible] [illegible], [illegible].01, [illegible] [illegible], [illegible]-01

---

[illegible]:[illegible] ([illegible])/[illegible].[illegible]/[illegible].[illegible].[illegible]-811/2024-25 [illegible]: 22 -07-2024

[illegible],

[illegible] [illegible],
[illegible] [illegible],
[illegible] [illegible],
[illegible].

[illegible],

[illegible]:- [illegible] [illegible].[illegible]. ([illegible]) [illegible] [illegible] [illegible] [illegible] [illegible] [illegible] [illegible] [illegible] [illegible]: 811 [illegible] [illegible] [illegible].

********

[illegible] [illegible].[illegible]. ([illegible]) [illegible] [illegible] [illegible] [illegible] [illegible] [illegible] [illegible] [illegible] [illegible] 811 [illegible] [illegible] [illegible] [illegible] [illegible] [illegible].

[illegible]

[illegible]

[illegible] [illegible]

# ಕರ್ನಾಟಕ ವಿಧಾನಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 811 |
| ಪ್ರಶ್ನೆ ಕೇಳಿರುವ ಸದಸ್ಯರು | ಯು ಬಿ ಬಣಕಾರ್ (ಹಿರೇಕೆರೂರು ) |
| ಉತ್ತರ ನೀಡುವ ಸಚಿವರು | ಮಾನ್ಯ ಕೃಷಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 24.07.2024 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರೈತರು ಬೆಳೆದ ಬೆಳೆಗಳಿಗೆ ಕಟಾವು ಪೂರ್ವದಲ್ಲಿ ಹೊಲದಲ್ಲಿ ಅಥವಾ ಗದ್ದೆಯಲ್ಲಿ (ನಿಂತ ಬೆಳೆಗೆ ) ಅಕಸ್ಮಿಕವಾಗಿ ಬೆಂಕಿ ತಗುಲಿ ರೈತರ ಬೆಳೆಗಳಲ್ಲಿ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಒದಗಿಸಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸದಿರಲು ಕಾರಣವೇನು ; | ರೈತರು ಬೆಳೆದ ಬೆಳೆಗಳಿಗೆ ಕಟಾವು ಪೂರ್ವದಲ್ಲಿ ಹೊಲದಲ್ಲಿ ಅಥವಾ ಗದ್ದೆಯಲ್ಲಿ ನಿಂತ ಬೆಳೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಒದಗಿಸಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸದಿರಲು ವಿವರಗಳು ಈ ಕೆಳಗಿನಂತಿವೆ :<br><br>ಕಟಾವು ಪೂರ್ವದಲ್ಲಿ ಹೊಲದಲ್ಲಿ ಅಥವಾ ಗದ್ದೆಯಲ್ಲಿ ನಿಂತ ಬೆಳೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ನೀಡುವ ವಿಷಯವನ್ನು ಪರಿಶೀಲಿಸಲಾಗಿ ಕೃಷಿ ಇಲಾಖಾ ಮಾರ್ಗಸೂಚಿಯನ್ನು ತಿದ್ದುಪಡಿ ಮಾಡದಿರಲು ವಿವರಗಳು ಈ ಕೆಳಗಿನಂತಿವೆ :<br><br>• ಕೇಂದ್ರ ಸರ್ಕಾರದ ನೈಸರ್ಗಿಕ ವಿಕೋಪಗಳಿಂದ ಬೆಳೆ ನಷ್ಟವಾದಲ್ಲಿ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಯಡಿ (ಕಂಡಿಕೆ 5.1 A & B) ನಿಂತ ಬೆಳೆಗೆ ಬೆಂಕಿ ತಗುಲಿ ಬೆಳೆ ನಷ್ಟ ಉಂಟಾದಲ್ಲಿ ಪರಿಹಾರ ನೀಡಲು ಅವಕಾಶ ಇರುವುದಿಲ್ಲ .<br>• ವಿದ್ಯುಚ್ಛಕ್ತಿಯ ಅವಘಡದಿಂದಾಗಿ ಬೆಳೆ ನಷ್ಟವಾದಲ್ಲಿ ಸಂಬಂಧಿಸಿದ ಇಲಾಖೆಯಿಂದ ನಷ್ಟ ಅಂದಾಜಿಸಿ , ನಿಯಮಾನುಸಾರ ಪರಿಹಾರವನ್ನು ಇಂಧನ ಇಲಾಖೆಯಿಂದ ನೀಡಲಾಗುತ್ತದೆ .<br>• ಸರ್ಕಾರದ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಮಾರ್ಗಸೂಚಿಯ ಕಂಡಿಕೆ 5.2.4 ರಡಿ ಸ್ಥಳೀಯ ವಿಕೋಪಗಳಡಿ ಅಂದರೆ ಮಿಂಚು ಕಾರಣದಿಂದ ಬೆಂಕಿ ಬಿದ್ದು , ಬೆಳೆ ನಷ್ಟವಾದಲ್ಲಿ ಪರಿಹಾರ ನೀಡಲು ಅವಕಾಶ ಇರುತ್ತದೆ .<br>• ಬೆಳೆ ಕಟಾವು ಆಗದೆ , ಕೆಲವು ಸಂದರ್ಭಗಳಲ್ಲಿ ಆಕಸ್ಮಿಕ ಬೆಂಕಿ ತಗುಲಿ ನಿಂತ ಬೆಳೆ ನಷ್ಟವಾದಲ್ಲಿ ಬೆಂಕಿ ತಗುಲಿರುವುದು ದುಷ್ಕೃತ್ಯದಿಂದಲೇ ಅಥವಾ ಬೇರೆ ಯಾವ ಕಾರಣದಿಂದಾಗಿದೆ ಎಂಬುದನ್ನು ತಿಳಿಯುವುದು ಕಷ್ಟಸಾಧ್ಯವಾಗುವುದರಿಂದ ಯಾವುದೇ ಮಾರ್ಗಸೂಚಿಯಲ್ಲಿ ಅಳವಡಿಸಿರುವುದಿಲ್ಲ . |
| ಆ) | ಅಕಸ್ಮಿಕವಾಗಿ ನಿಂತ ಬೆಳೆಗೆ ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಕೋರಿ ರಾಜ್ಯಾದ್ಯಂತ ಎಷ್ಟು | ಆಕಸ್ಮಿಕವಾಗಿ (ನಿಂತ ಬೆಳೆಗೆ ) ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಕೋರಿ ರಾಜ್ಯಾದ್ಯಂತ ಒಟ್ಟು 51 ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ . ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ . |

| | | |
|---|---|---|
| | ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ : (ಜಿಲ್ಲಾವಾರು , ತಾಲ್ಲೂಕುವಾರು , ರೈತರ ಹೆಸರು ಸಹಿತ ಸಂಪೂರ್ಣ ವಿವರ ನೀಡುವುದು ) | |
| ಇ) | ಇಂತಹ ಪ್ರಕರಣಗಳಿಗೆ ಪರಿಹಾರ ಕಲ್ಪಿಸಲು ತಾತ್ಕಾಲಿಕವಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ : ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು : (ವಿವರ ನೀಡುವುದು ) | ಆಕಸ್ಮಿಕವಾಗಿ (ನಿಂತ ಬೆಳೆಗೆ ) ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಪ್ರಕರಣಗಳಿಗೆ ಕೃಷಿ ಇಲಾಖೆ ಮಾರ್ಗಸೂಚಿಯಲ್ಲಿ ಪರಿಹಾರ ನೀಡಲು ಅವಕಾಶ ಇಲ್ಲದಿರುವುದರಿಂದ ಸದರಿ ಪ್ರಕರಣಗಳನ್ನು ಉಪವಿಭಾಗಾಧಿಕಾರಿಯವರ ಸಮಿತಿಯಲ್ಲಿ ತಿರಸ್ಕರಿಸಲಾಗಿದೆ . |
| ಈ) | ರೈತರು ಬೆಳೆದ ಬೆಳೆಗಳನ್ನು ಕಟಾವು ಪೂರ್ವದಲ್ಲಿ ಹೊಲದಲ್ಲಿ ಅಥವಾ ಗದ್ದೆಯಲ್ಲಿ ಅಥವಾ (ನಿಂತ ಬೆಳೆಗೆ ) ಆಕಸ್ಮಿಕವಾಗಿ ಬೆಂಕಿ ತಗುಲಿ ರೈತರ ಬೆಳೆಗಳ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಒದಗಿಸಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ? | ಕಂಡಿಕೆ (ಅ) ಮತ್ತು (ಇ)ಗಳಲ್ಲಿ ವಿವರಿಸಿದ ಕಾರಣಗಳಿಂದಾಗಿ ಮಾರ್ಗಸೂಚಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಿರುವುದಿಲ್ಲ . |

ಕೃಷಿ

ನಿರ್ದೇಶಕರು

ರೈತರು ಬೆಳೆದ ಬೆಳೆಗಳಾದ ಗೋವಿನಜೋಳದ ತೆನೆ ರಾಶಿ ಬಣವೆ ರಾಶಿ ಹಾಗೂ ಕಬ್ಬುಗಳನ್ನು ರೈತರು ಕಟಾವು ಮಾಡಿ ಒಗ್ಗೂಡಿಸಿ ಇಟ್ಟ ಸಂದರ್ಭದಲ್ಲಿ ಬೆಂಕಿ ತಗುಲಿ ಹಾನಿ ಉಂಟಾಗಿದ್ದರೆ, ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಪರಿಹಾರ ಒದಗಿಸಲಾಗುತ್ತಿದೆ. ಆದರೇ, ಅದೇ ಬೆಳೆಗೆ ಕಟಾವು ಪೂರ್ವ ದಲ್ಲಿ ಹೊಲದಲ್ಲಿ ಅಥವಾ ಗದ್ದೆಯಲ್ಲಿ (ನಿಂತ ಬೆಳೆಗೆ) ಆಕಸ್ಮಿಕವಾಗಿ ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಒದಗಿಸಲು ಮಾರ್ಗಸೂಚಿಯಲ್ಲಿ ಅವಕಾಶ ಇರುವುದಿಲ್ಲ ಸದರಿ ಅಂಶವನ್ನು ಉನ್ನತ ಮಟ್ಟದಲ್ಲಿ ಚರ್ಚಿಸಿ ಪರಿಶೀಲಿಸಲಾಗುವುದು.

ಹೆಚ್ಚಿನ ಪರಿಹಾರ ನೀಡುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ.